**ಸಾಕ್ಷಿಯನ್ನು ದಿನಾಂಕಃ 22.08.2024 ರಂದು ಕರೆದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಪಿ.ಎಮ್.ವಿ ವಕೀಲರಿಂದಃ**

ನಮ್ಮ ತಾಯಿಯವರ ಆರೋಗ್ಯ ಸ್ಥಿತಿ ಚೆನ್ನಾಗಿ ಇರುವುದಿಲ್ಲ. ಅವರು ಬಿ.ಪಿ ಮತ್ತು ಸಕ್ಕರೆ ಕಾಯಿಲೆ ಹಾಗೂ ಅಸ್ತಮಾ ಕಾಯಿಲೆಯಿಂದ ಬಳಲುತ್ತಿದ್ದಾರೆ. ಇವುಗಳಿಗೆ ಸಂಬಂದಿಸಿದಂತೆ ನಾನು ನ್ಯಾಯಾಲಯಕ್ಕೆ ವೈದ್ಯಕೀಯ ಪತ್ರಗಳನ್ನು ಹಾಜರ ಮಾಡಿರುವುದಿಲ್ಲ. ನನ್ನ ತಾಯಿ ಅಡ್ಡಾಡುವ ಸ್ದಿತಿಯಲ್ಲಿಇರುತ್ತಾರೆ ಆದರೆ ಅವರು ಯಾವುದೇ ಕೆಲಸ ಮಾಡುವುದಿಲ್ಲ.

ದಾವಾ ಆಸ್ತಿಗಳನ್ನು ನಾವು ಖರೀದಿ ಮಾಡುವಾಗ ಅವುಗಳಲ್ಲಿ ಒಂದು ಶೆಡ್ಡ ಇತ್ತು ಆದರೆ ಈಗ ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಮೊದಲಿನಿಂದಲೂ ಪ್ರತಿವಾದಿ ದಾವಾ ಆಸ್ತಿಗಳ ಸ್ವಾಧಿನದಲ್ಲಿ ಇರುತ್ತಾಳೆ ಎಂದರೆ ಸರಿ. ನನ್ನ ಸಾಕ್ಷ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ ನಂ 2 ರಲ್ಲಿ ವಾದಿಯು ದಾವಾ ಆಸ್ತಿಯ ಮಾಲೀಕಳು, ಕಬ್ಜೆದಾರಳು ಹಾಗೂ ವಹಿವಾಟಿದಾರಳು ಇರುತ್ತಾಳೆ ಎಂದು ನಾನು ಹೇಳಿ ಬರೆಸಿರುತ್ತೇನೆ. ಈ ದಾವೆಯಲ್ಲಿ ನಾವು ದಾವಾ ಆಸ್ತಿ ಶೆಡ್ಡ ಇರುತ್ತದೆ ಎಂದು ಬರೆಸಿರುತ್ತೇನೆ. ವಾದ ಪತ್ರವನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ.

ನನ್ನ ತಂದೆಯವರು ಈಗ ಸುಮಾರು 40 ವರ್ಷಗಳಿಂದ ಮುಧೋಳದಲ್ಲಿಯೇ ಇರುತ್ತಾರೆ ಎಂದರೆ ಸರಿ. ನಾನು ನಮ್ಮ ತಂದೆಯ ಜೋತೆ ಮುಧೋಳಕ್ಕೆ ಬಂದಿರುತ್ತೇನೆ. ನಮ್ಮ ತಂದೆಯವರಿಗೆ ಅಂಬಾದಾಸ

ಪಡತಾರೆ ಇವರ ಮನೆಯವರ ಬಗ್ಗೆ ಮೊದಲಿನಿಂದಲೂ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೂ ಸಹ ಮೊದಲಿನಿಂದ ಅವರ ಪರಿಚಯ ಇರುವುದಿಲ್ಲ ಎಂದು ನುಡಿಯುತ್ತಾರೆ.

ಅಂಬಾದಾಸ ಪಡತಾರೆ ಇವರ ಜೊತೆ ನಿಮ್ಮ ತಾಯಿ ಅಥವಾ ತಂದೆ ವ್ಯವಹಾರ ಮಾಡಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ವ್ಯವಹಾರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ಖರೀದಿ ಮಾಡುವ ಸಮಯದಲ್ಲಿ ನನ್ನ ತಾಯಿಯಾದ ವಾದಿ ಇವರು ಸದರಿ ದಾವಾ ಆಸ್ತಿಗಳಲ್ಲಿ ಯಾರು ಸ್ವಾಧೀನತೆಯಲ್ಲಿಇರುತ್ತಾರೆ ಎಂದು ವಿಚಾರಣೆ ಮಾಡಿರುತ್ತಾರೆ. ಆಗ ನನ್ನ ತಾಯಿಗೆ ದಾವಾ ಆಸ್ತಿಗಳ ಸ್ವಾಧೀನತೆಯಲ್ಲಿ ಪ್ರತಿವಾದಿ ಇರುತ್ತಾಳೆ ಎಂದು ಕಂಡುಬಂದಿರುತ್ತದೆ. ನಮ್ಮ ತಾಯಿ ದಾವಾ ಆಸ್ತಿಗಳನ್ನು ಖರೀದಿ ಮಾಡುವ ಸಮಯದಲ್ಲಿ ನಾನು ಇರಲಿಲ್ಲ. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಖರೀದಿ ಪತ್ರ ಆಗುವುದಕ್ಕಿಂತ ಮುಂಚೆ ನಮ್ಮ ತಾಯಿ ದಾವಾ ಆಸ್ತಿಗಳ ಸ್ವಾಧೀನತೆಯನ್ನು ಪಡೆದುಕೊಂಡಿರುವುದಿಲ್ಲ. ಖರೀದಿ ಪತ್ರದಲ್ಲಿ ದಾವಾ ಆಸ್ತಿಗಳನ್ನು ಸ್ವಾಧೀನತೆಯನ್ನು ಕೊಟ್ಟಿರುತ್ತೇವೆ ಎಂದು ಬರೆದಿದ್ದು ಇರುತ್ತದೆ. ನಿಪಿ-5 ಖರೀದಿ ಪತ್ರದ 2 ನೇ ಪುಟದಲ್ಲಿ "ಖುಲ್ಲಾ ಆಸ್ತಿಯನ್ನು ದಕ್ಕ ಖರೀದಿ ಕೊಟ್ಟಿ ಆಸ್ತಿನಿಮ್ಮ ತಾಬಾಕ್ಕೆ ಕೊಟ್ಟಿರುತ್ತೇನೆ" ಎಂದು ಬರೆದಿರುವುದು ಸರಿ ಇರುತ್ತದೆ. ನಿಪಿ-5 ಖರೀದಿ ಪತ್ರದ ಪುಟ ನಂ.1 ರಲ್ಲಿ " ನಾನು ಖರೀದಿ ತಕ್ಕೊಂಡ ನನ್ನ ಸ್ವಂತಾರ್ಜಿತ ಮಾಲ್ಕಿ ವಹಿವಾಟಿ ಮನೆ ವ ಖುಲ್ಲಾ ಜಾಗೆ" ಅಂತಾ ಬರೆದಿರುವುದು ಸರಿ ಇರುತ್ತದೆ. ಅಂಬಾದಾಸ ರವರಿಗೆ ಖರೀದಿ ಹಣವನ್ನು ನಾವು ಚೆಕ್ಕ ಮುಖಾಂತರ ಕೊಟ್ಟಿರುತ್ತೇವೆ. ನಮ್ಮ ತಾಯಿಯವರೆ ಚೆಕ್ಕ ಮುಖಾಂತರ ಖರೀದಿ ಹಣವನ್ನು ಕೊಟ್ಟಿರುತ್ತಾರೆ. ನಿಪಿ-5 ಖರೀದಿ ಪತ್ರದ ಪುಟ ಸಂಖ್ಯೆ -3 ರಲ್ಲಿ " 6,20,000/- (ಆರು ಲಕ್ಷ ಇಪ್ಪತ್ತು ಸಾವಿರ ರೂಗಳು) ರೂಗಳನಲು ರೋಖ ಕೊಟ್ಟಿರುತ್ತೇವೆ ಮತ್ತು ಅವು ಮುಟ್ಟಿರುತ್ತವೆ ಅಂತಾ ಆಸ್ತಿ ನಿಮ್ಮ ತಾಬಾಕ್ಕೆ ಕೊಟ್ಟಿರುತ್ತೇವೆ" ಅಂತಾ ಬರೆದಿರುವುದು ಸರಿ ಇರುತ್ತದೆ. ನಿಪಿ-5 ಒಂದು ಬೋಗಸ ಖರೀದಿ ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಪ್ರತಿವಾದಿಯ ಗಂಡನಾದ ಅಂಬಾಸಾ ಕೂಡಿಕೊಂಡು ನನ್ನ ತಾಯಿಯಾದ ವಾದಿಯ ಹೆಸರಿನಲ್ಲಿ ನಿಪಿ-5 ರಂತೆ ಒಂದು ಬೋಗಸ ಖರೀದಿ ಪತ್ರವನ್ನು ತಯಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಂಬಾದಾಸ ಇವನು ನನ್ನ ತಾಯಿ ಹತ್ತಿರದಿಂದ ಯಾವುದೇ ಖರೀದಿ ಹಣವನ್ನು ತೆಗೆದುಕೊಳ್ಳದೆ ಮತ್ತು ದಾವಾ ಆಸ್ತಿಯ ಸ್ವಾದೀನತೆಯನ್ನು ಕೊಡದೆ ತನ್ನ ಹೆಂಡತಿಯಾದ ಪ್ರತಿವಾದಿಗೆ ಮೊಸ ಮಾಡುವ ಉದ್ದೇಶದಿಂದ ನಿಪಿ-5 ರಂತೆ ಒಂದು ಖರೀದಿ ಪತ್ರವನ್ನು ಸೃಷ್ಠಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ವಿಷಯ ಪ್ರತಿವಾದಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

ನಮ್ಮ ತಾಯಿಗೆ ಅಂಬಾದಾಸ ಇವನಿಗೆ ಪ್ರತಿವಾದಿ ಸುಸೀಲಾಬಾಯಿ ಹೆಂಡತಿ ಇರುತ್ತಾಳೆ ಎಂದು ಮಾಹಿತಿ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ಸಮೀರವಾಡಿ ಸಕ್ಕರೆ ಕಾರ್ಖಾನೆಯಲ್ಲಿ ಈಗ ಸುಮಾರು 35 ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ ಸಾಕ್ಷಿ ಮುಂದುವರೆದು ಈಗ ನೀರಾಣಿ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಡಿ.ಆರ ಸಿಂದೆ ಮತ್ತು ಬಿ.ಟಿ.ಪಂಚಗಾಂವಿ ಇವರು ಮುಧೋಳ ಪಟ್ಟದ ದೊಡ್ಡ ರೈತರು ಮತ್ತು ಕಬ್ಬು ಬೆಳೆಗಾರರು ಆಗಿರುತ್ತಾರೆ ಎಂದರೆ ಸರಿ.

ಸದರಿಯವರ ಬೆಳೆದ ಕಬ್ಬು ನನ್ನ ತಂದೆಯ ಸಹಾಯದಿಂದ ಸಕ್ಕರೆ ಕಾರ್ಖಾನೆಗೆ ಹೋಗುತ್ತವೆ ಎಂದರೆ ಸರಿ. ನನ್ನ ತಂದೆಯವರ ಮಾತಿನಂತೆ ಸದರಿ ಡಿ.ಆರ್.ಸಿಂದೆ ಮತ್ತು ಬಿ.ಟಿ.ಪಂಚಗಾಂವಿ ಇವರು ನಿಪಿ-5 ಖರೀದಿ ಪತ್ರದ ಮೇಲೆ ಸಾಕ್ಷಿ ಅಂತಾ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಡಿ.ಆರ್.ಸಿಂದೆ ಮತ್ತು ಬಿ.ಟಿ.ಪಂಚಗಾಂವಿ ಇವರನ್ನು ಯಾರು ಕರೆದುಕೊಂಡು ಬಂದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ನನ್ನ ದೋಸ್ತರು ಇರುತ್ತಾರೆ ಎಂದು ನುಡಿಯುತ್ತಾರೆ. ನಾವು ಖರೀದಿ ಮಾಡಿದ ದಿನಾಂಕದಿಂದ ಇಲ್ಲಿಯವರೆಗೂ ಪ್ರತಿವಾದಿಗೆ ಬೇಟಿ ಆಗಿರುವುದಿಲ್ಲ ಎಂದರೆ ಖರೀದಿ ಮಾಡಿದ ನಂತರ ಬೇಟಿ ಆಗಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಪ್ರತಿವಾದಿಗೆ ಏಕೆ ಬೇಟಿಯಾಗಿದ್ದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾವು ಕಬ್ಜಾ ಕೋಡಿರಿ ಅಂತಾ ಬೇಟಿಯಾಗಿದ್ದೇವು ಎಂದು ನುಡಿಯುತ್ತಾರೆ. ಪ್ರತಿವಾದಿ ಕಬ್ಜಾ ಕೊಟ್ಟರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ನಮಗೆ 2-3 ತಿಂಗಳು ಸಮಯ ಕೋಡಿರಿ ನಾನು ಸ್ವಾಧೀತನೆಯನ್ನು ಕೊಡುತ್ತೇನೆ ಅಂತಾ ಹೇಳಿದ್ದರೂ ಎಂದು ನುಡಿಯುತ್ತಾರೆ. 2-3 ತಿಂಗಳು ಆದ ನಂತರ ನೀವು ಪ್ರತಿವಾದಿಗೆ ಸ್ವಾಧೀನತೆಯನ್ನು ಕೊಡಲು ಕೇಳಿದ್ದಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯ ಅದರ ಅವಶ್ಯಕತೆ ಬಿಳಲಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ಶ್ರೀ.ಪಿ.ಎಮ್.ವಿ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮೂಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ